ಹಂಬಲಿಸುತ್ತಿದ್ದೇವೇನೋ ಎನ್ನುವುದೇ ಇದರ ಧ್ವನಿ.

ನನಗೇನೋ **The world is too much with us** ಎನ್ನುವುದೇ ಈ ನಮ್ಮ ಕಾಲದ ಮೂಲ ಗುಣ, ಅವಗುಣ, ಸವಾಲು, ದುರಂತ ಎಲ್ಲವೂ ಆಗಿದೆ ಅನ್ನಿಸುತ್ತದೆ. ದುರ್ದಮ್ಯ ಆಮಿಷಗಳು ಮತ್ತು ಇದರಿಂದಲೇ ಎದುರಾಗುವ ಆಯ್ಕೆಯ ದ್ವಂದ್ವಗಳೇ ನಮ್ಮ ಕಾಲವನ್ನು ಎಂದಿಲ್ಲದ ಸಂಕೀರ್ಣತೆಗೆ ಮತ್ತು ಅಪಾಯಗಳಿಗೆ ತಳ್ಳಿದೆ. ಸ್ಮಾಲ್ ಈಸ್ ಬ್ಯೂಟಿಫುಲ್ ಎನ್ನುವುದಾಗಲೀ, ಸರಳತೆಯೇ ಅಂತಿಮ ಸೌಂದರ್ಯ ಎನ್ನುವುದಾಗಲೀ ನಮಗೆ ಹಾಸ್ಯಾಸ್ಪದವಾಗಿ, ಅಸಂಬದ್ಧವಾಗಿ ಕಾಣಿಸುತ್ತಿರುವುದು ಇನ್ನೆಲ್ಲೋ ಅಲ್ಲ ನಮ್ಮ ನಮ್ಮ ಮನೆ ಮನಗಳಲ್ಲಿಯೇ ಅಲ್ಲವೆ? ದೈನ್ಯವಿಲ್ಲದ ಬದುಕೇ ಮನುಷ್ಯ ಬಯಸಬಹುದಾದ ಆತ್ಯಂತಿಕವಾದ ಸ್ಥಿತಿ ಎನ್ನುವ ನಂಬಿಕೆ ಈಗ ಬುಡ ಮೇಲಾಗಿದೆ. ದೈನ್ಯದ ಪರಿಕಲ್ಪನೆಯೇ ಬದಲಾಗಿ ಬಿಟ್ಟಿದೆ. ಸಂಪತ್ತು ನಮ್ಮ ಅನುಕೂಲಕ್ಕೆ, ಸುಖಕ್ಕೆ ಎನ್ನುವುದಕ್ಕಿಂತ ಇತರರ ಎದುರಿಗಿನ ಅದರ ಪ್ರದರ್ಶನ, ಅದರಿಂದ ಹೆಚ್ಚಬಹುದಾದ ತನ್ನ ಪ್ರತಿಷ್ಠೆ(!)ಯೇ ಮುಖ್ಯವಾಗಿದೆ ಎನ್ನುವುದು ನಮ್ಮ ಅನುಭವಕ್ಕೆ ಪ್ರತಿನಿತ್ಯವೂ ಬರುತ್ತಲೇ ಇರುತ್ತದೆ.

ಅಧ್ಯಯನವೊಂದು ಹೇಳುತ್ತದೆ. ಮಧ್ಯಮ ವರ್ಗದ ಮನೆಗಳಲ್ಲಿ ಶೇ. 40–50 ಬೇಡದ ವಸ್ತುಗಳ ಸಂಗ್ರಹವಿದ್ದರೆ ಮೇಲ್ವರ್ಗದ ಮನೆಗಳಲ್ಲಿ ಇದರ ಪ್ರಮಾಣ ಶೇ. 60–70 ಎಂದು.

ಎರಡು ಮೂರು ದಶಕಗಳ ಹಿಂದೆ ಕೈನೆಟಿಕ್ ದ್ವಿಚಕ್ರವಾಹನದವರು, ನಮ್ಮ ಮನೆಯ ಎರಡನೆಯ ವಾಹನ ಕೈನೆಟಿಕ್ ಎನ್ನುವ ಜಾಹಿರಾತನ್ನು ಪ್ರಕಟಿಸಿದಾಗ ಒಂದು ವಾಹನ ಕೊಳ್ಳುವುದೇ ಕಷ್ಟ ಎನ್ನುವ ಮಧ್ಯಮವರ್ಗಕ್ಕೆ ಅದು ಗೇಲಿ ಮತ್ತು ವ್ಯಂಗ್ಯದಂತೆ ಕಂಡಿತ್ತು. ಆದರೆ ಕಾಲಚಕ್ರ ಅದೆಷ್ಟು ಬೇಗ ಉರುಳಿ, ಅದೇ ಮಧ್ಯಮವರ್ಗದ ಕುಟುಂಬಕ್ಕೆ ಇಂದು ಎರಡು ದ್ವಿಚಕ್ರ ವಾಹನಗಳಲ್ಲ, ಎರಡು ಕಾರುಗಳೂ ಸಾಲದು, ಅದರಲ್ಲೂ ಇನ್ನೂ ದುಬಾರಿಯದನ್ನು ಕೊಳ್ಳಬೇಕೆನ್ನುವ ಅತೃಪ್ತಿ ದಳ್ಳುರಿಯಂತೆ ಸುಡುತ್ತಲೇ ಇರುತ್ತದೆ.

ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಓದಲು ಹಾಸ್ಟೆಲ್‌ನಲ್ಲಿದ್ದ ನನ್ನ ತಮ್ಮ ಅವನ ರೂಮ್‌ಮೇಟ್ ಹತ್ತಿರ ನಾಲ್ಕೇ ಜೊತೆ ಬಟ್ಟೆಗಳಿವೆ, ನಾನು ಹೆಚ್ಚು ಇಟ್ಟುಕೊಳ್ಳುವುದಕ್ಕೆ ಹಿಂಸೆಯಾಗುತ್ತದೆ ಎಂದು ಅವನಲ್ಲಿದ್ದ ಬಟ್ಟೆಗಳನ್ನು ತಂದು ಮನೆಯಲ್ಲಿಟ್ಟದ್ದು ನೆನ್ನೆ ಮೊನ್ನೆಯಂತೆ ಭಾಸವಾಗುತ್ತಿರುವಾಗಲೇ ನನ್ನ ಮಗ ಅವನ ಸ್ನೇಹಿತರ ಹತ್ತಿರ ಇಲ್ಲದಂತಹ ಬಟ್ಟೆಗಳನ್ನೇ ಕೊಳ್ಳಬೇಕೆಂದು ಹಪಹಪಿಸುವಾಗ ಭಯವಾಗುತ್ತದೆ. ಹೀಗೆ ಹೇಳುತ್ತಿರುವಾಗಲೇ ಬೀರು ತುಂಬಿ ಹರಿಯುವ ನನ್ನ ಸೀರೆಗಳನ್ನು ನೋಡಿದಾಗ ನಾಲ್ಕು ಬೆರಳುಗಳು ನನ್ನನ್ನೇ ತಿವಿಯುವುದೂ ಅಷ್ಟೇ ಸತ್ಯ. ಬಡಿವಾರವೇ ಬದುಕಿನ ಕ್ರಮವಾಗುವ ಕಾಲ ಬಹುಶಃ ಹಿಂದೆಂದೂ ಇಂಥ ಪ್ರಮಾಣ ಮತ್ತು ಸ್ವರೂಪದಲ್ಲಿ ಇರಲಿಲ್ಲವೇನೋ. ಮನುಷ್ಯ ಸಹಜವಾದ ದೌರ್ಬಲ್ಯಗಳು, ಅದು ದುರಾಸೆ, ಕ್ರೌರ್ಯ, ಕೇಡಿಗತನ, ಇನ್ನೊಬ್ಬರನ್ನು ಕೊಂದು ಬದುಕುವ ಅಮಾನವೀಯತೆ... ಯಾವುದೂ ಇರಬಹುದು. ಇವುಗಳನ್ನು ಗೆಲ್ಲಲಾಗದಿದ್ದರೂ ಅದುಮಿಟ್ಟುಕೊಳ್ಳುವ ವಿವೇಕವನ್ನಾದರೂ ಉಳಿಸಿಕೊಳ್ಳುವುದೇ ಎಲ್ಲ ಕಾಲದ, ಎಲ್ಲ ಸಮುದಾಯದ ಆಶಯ ಮತ್ತು ಪ್ರಯತ್ನಗಳು. ಆದರೆ, ಮನುಷ್ಯನ ಮೃಗತ್ವವನ್ನು ಈ ನಮ್ಮ ಕಾಲದಲ್ಲಿ ಪ್ರಭುತ್ವವೇ ಬೆಂಬಲಿಸಿದಷ್ಟು, ಅದನ್ನು ಇದೇ ಬದುಕುವ ದಾರಿ ಎನ್ನುವ ಭಂಡತನದಲ್ಲಿ ಹೀಗೆ ಸಮರ್ಥಿಸಿದ ಮತ್ತು ಅಸಹಾಯಕತೆಯಲ್ಲಿ ಅದಕ್ಕೆ ಬಲಿಯಾಗುವ ದುರಂತ ಹಿಂದೆ ಯಾವ ಕಾಲದಲ್ಲಾದರೂ ಇತ್ತೆ, ಅನುಮಾನ ನನಗೆ. ಧರ್ಮ, ಜಾತಿ, ವರ್ಗಗಳ ನಡುವಿನ ತೀವ್ರವಾದ ಘರ್ಷಣೆ ಅದನ್ನೇ ಬಂಡವಾಳ ಮಾಡಿಕೊಂಡ ರಾಜಕಾರಣ ಇವುಗಳನ್ನು ನೋಡುತ್ತಿದ್ದರೆ ಅಸಹನೆ, ಅಶಾಂತಿಗಳ ಕಾಲವೋ ನಮ್ಮದು ಎನ್ನುವ ಭಾವಾವೇಶ ಹೆಚ್ಚುತ್ತಾ ಅನೇಕ ಬಾರಿ